ಮಾಡಿಕೊಳ್ಳುವಂಥ ಮನೆಗೆ ನಾನು ನನ್ನ ಮಗಳನ್ನು ಕೊಡಲಾರೆ."

ನಾನು ತಕ್ಷಣ ಮಾತಿನ ದಿಕ್ಕನ್ನು ಹೊರಳಿಸುವ ಪ್ರಯತ್ನ ಮಾಡಿದೆ, "ಪ್ರಕಾಶರೇ, ನಾನೂ ನಿಮ್ಮ ಹಾಗೆಯೇ ಯೋಚಿಸುವವನು." ನಂತರ ನಾನು ಇಂಗ್ಲಿಷಿನಲ್ಲಿ ಸ್ವಲ್ಪ ಮಾತನಾಡಿದೆ, ಆದರೆ ಆಗಲೇ ಸರಿತಾ ಚುಕ್ಕಾಣಿಯನ್ನು ಹಿಡಿದು ಪ್ರಕಾಶ್ ಅಂಡ್ ಪರಿವಾರಕ್ಕೆ ಹೆಣ್ಣಿನ ಗುಣಗಳ ಬಗ್ಗೆ ಭಾಷಣ ಬಿಗಿಯಲು ಆರಂಭಿಸಿದ್ದಳು.

ಹತ್ತು ನಿಮಿಷಗಳ ನಂತರ ನಾವು ಚಹಾ ಕುಡಿದು ಎದ್ದು ಬಂದೆವು. ನೀನು ಒಳ್ಳೆಯ ಸಂಬಂಧದಲ್ಲಿ ಸರಿತಾ ಎಂಬ ಹುಳಿಯನ್ನು ಹಿಂಡಿದೆ ಎಂದು ಹೊರ ಬಂದಾಗ ಲಾಲಾಗೆ ಹೇಳಲು ಮನಸ್ಸಾಯಿತು. ಆದರೆ ಸರಿತಾ ಪಕ್ಕದಲ್ಲಿಯೇ ಇದ್ದಳು, ಹೀಗಾಗಿ ಬಾಯಿ ಮುಚ್ಚಿಕೊಂಡಿರುವುದು ಲೇಸಾಗಿತ್ತು.

ಸ್ವತಂತ್ರ ವಿಚಾರಧಾರೆಯುಳ್ಳ ಹೆಣ್ಣು ಮಕ್ಕಳನ್ನು ಮನೆಯ ಹೊರಗಿಡಬೇಕು, ಮನೆಯೊಳಗಲ್ಲ ಎಂದು ರಸ್ತೆಯಲ್ಲಿ ಸರಿತಾ ನನಗೆ ತಿಳಿವಳಿಕೆ ಹೇಳುತ್ತಿದ್ದಳು. ನಾನು ಸಹ ನನಗೆ ಅರಿವಿಲ್ಲದಂತೆಯೇ ಹೇಳಿದೆ, "ಸರಿತಾ, ಎಂಥ ಮಾತಾಡ್ತೀಯ? ನೀನೇನು ಕಡಿಮೆ ಸ್ವತಂತ್ರಳಾಗಿದ್ದೆಯಾ? ಇಂದಿಗೆ ಮೂವತ್ತು ವರ್ಷಗಳ ಹಿಂದೆ ನಿನಗೆ ಇಬ್ಬರುಮೂರು ಜನ ಬಾಯ್ ಫ್ರೆಂಡ್‌ಗಳಿದ್ದರು! ರಾತ್ರಿ ವೇಳೆಯಲ್ಲೂ ನೀನು ಹಿಂದುಮುಂದು ಯೋಚಿಸದೆ ಬಾಯ್ಸ್ ಹಾಸ್ಟೆಲ್‌ಗೆ ಹೋಗುತ್ತಿದ್ದೆ."

ಸರಿತಾಳ ಮುಖ ಕೆಂಪಗಾಯಿತು. ಲಾಲಾ ಮುಖ ಮುಚ್ಚಿಕೊಂಡು ನಗುವುದನ್ನು ನಾನು ಗಮನಿಸಿದೆ. ಅಕಸ್ಮಾತ್ ಸರಿತಾಳ ಒಳಗೆ ದೇವತೆ ಅವತರಿಸಿದಂತೆ ಕಂಡಿತು, ಅವಳ ಮುಖದಲ್ಲಿ ನೊರೆ ಬಂತು, ತಲೆಕೂದಲುಗಳು ಹರಡಿಕೊಳ್ಳುವುದರಲ್ಲಿದ್ದವು, "ನೀನು ಶುದ್ಧ ಮೂರ್ಖ, ಉದಯ್! ಯಾರ ಬಗ್ಗೆ ನೀನು ಹೇಳುತ್ತಿದ್ದೀಯೋ, ತಿಳಿಯುತ್ತಿಲ್ಲ. ನಾನು ಕಾಲೇಜಿನಲ್ಲಿ ಎಲ್ಲರಿಗಿಂತ ಸರಳ ಸ್ವಭಾವದ ಹುಡುಗಿಯಾಗಿದ್ದೆ. ನೀನು ಸುಮ್ಮಸುಮ್ಮನೆ ನನ್ನನ್ನು ದೂಷಿಸುತ್ತಿದ್ದೀಯ. ನೀನು ನಮ್ಮ ಸೊಸೈಟಿಗೆ ಯೋಗ್ಯ ಅಲ್ಲವೆಂದು ಲಾಲಾ ಹೇಳಿದ್ದು ನಿಜವಾಗಿತ್ತು."

ನಾನು ವಿಷಯವನ್ನು ಮುಂದುವರೆಯಲು ಬಿಡದೆ ಹೇಳಿದೆ, "ಸರಿತಾ, ನೀನೇಕೆ ಸಿಟ್ಟಾಗುತ್ತಿದ್ದೀಯ? ಆ ಕಾಲದಲ್ಲಿ ನಮಗೆ ಯೌವನವಿತ್ತು, ನಾವೆಲ್ಲರೂ ಮಜಾ ಮಾಡುತ್ತಿದೆವು ಎಂದಷ್ಟೇ ನಾನು ಹೇಳುತ್ತಿದ್ದೆ."

"ಮಜಾ... ನಿನ್ನೊಂದಿಗೆ ನನ್ನನ್ನೇಕೆ ಎಳೆದು ತರುತ್ತಿದ್ದೀಯ? ಸದ್ಯ, ನಾನು ನಿನ್ನನ್ನು ನನ್ನ ಮನೆಗೆ ಕರೆದುಕೊಂಡು ಹೋಗಲಿಲ್ಲ; ಇಲ್ಲದಿದ್ದರೆ, ನೀನು ನನ್ನ ಹಸ್ಬೆಂಡ್ ಎದುರು ಏನೇನು ವ್ಯರ್ಥವಾಗಿ ಹರಟುತ್ತಿದ್ದೆಯೋ?"

ತದನಂತರವೂ ಅವಳು ಏನೋ ಬಡಬಡಿಸುತ್ತಿದ್ದಳು. ನನ್ನ ಮನೆಯವರೆಗೆ ಅವಳನ್ನು ನನ್ನ ಕಾರಿನಲ್ಲಿ ಮನೆಗೆ ಕರೆತಂದೆ. ನನ್ನ ಮನೆಯ ಎದುರು ಲಾಲಾನ ಸ್ಕೂಟರ್ ನಿಂತಿತ್ತು. ಲಾಲಾ ಮನೆಯೊಳಗೆ ಬರಲಿಲ್ಲ, ನನ್ನ ತಂಗಿಯಾಗಿದ್ದ ಸರಿತಾ ಸಹ ಬರಲಿಲ್ಲ. ಲಾಲಾ ನೆಗೆದು ಕಿಕ್ ಹೊಡೆದ; ಇಬ್ಬರೂ ನೋಡನೋಡುತ್ತಿದ್ದಂತೆಯೇ ಕಣ್ಮರೆಯಾದರು.

ಇದೇನಾಯಿತೆಂದು ಸ್ವಲ್ಪ ಹೊತ್ತು ನನಗೂ ಅರ್ಥವಾಗಲಿಲ್ಲ. ಒಂದು ಒಳ್ಳೆಯ ಪರಿವಾರದೊಂದಿಗೆ ಸಂಬಂಧ ಕಳಚಿ ಹೋಯಿತು; ಆದರೆ ಅದಕ್ಕಿಂತಲೂ ಹೆಚ್ಚಾಗಿ, ಸರಿತಾಳಿಗೆ ಈ ಇಳಿ ವಯಸ್ಸಿನಲ್ಲಿ ಕ್ಯಾರೆಕ್ಟರ್ ಸರ್ಟಿಫಿಕೇಟಿನ ಅಗತ್ಯವೇಕಾಯಿತು ಎಂದು ನನಗೆ ಗಾಬರಿಯಾಯಿತು.